# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-06

Cw-06

ಸಾಕ್ಷಿದಾರರ ಹೆಸರುಃ ಶ್ರೀ ಗುಡ್ಡಪ್ಪ ಮೇಡ್ಲೇರಿ

ತಂದೆಃಗಂಡನ ಹೆಸರುಃ ಶ್ರೀ ದಿಳ್ಳೆಪ್ಪ

ವಯಸ್ಸುಃ 47 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:17.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈ ಕೇಸಿನ ಪಿರ್ಯಾದಿ ಮತ್ತು ಚಾಸಾ-4 ಮತ್ತು 5 ಹಾಗೂ ಆರೋಪಿತರು ನನಗೆ ಗೊತ್ತು. ಅವರೆಲ್ಲರೂ ನಮ್ಮೂರಿನವರು. ನಮ್ಮೂರಿನ ಪಂಚಾಯತಿ ಕಟ್ಟಡ ಕಟ್ಟುವ ಸಲುವಾಗಿ ಜಮೀನಿನ ಮಾಲೀಕರಾದ ಕರಿಯಲ್ಲಪ್ಪ ಸುಾಣಗಿ ಇವರು 3 ಗುಂಟೆ ಜಮೀನನ್ನು ದಾನವಾಗಿ ಕೊಟ್ಟಿದ್ದರು. ಆಗ ಆರೋಪಿತರು ಸದರಿ 03 ಗುಂಟೆ ಜಮೀನಿನಲ್ಲಿ ನಮ್ಮೂರಿನ ಪಂಚಾಯತಿ ಕಟ್ಟಡ ಕಟ್ಟ ಬಾರದು ಎಂದು ತಂಟೆ-ತಕರಾರು ಮಾಡಿದರು. ಆದರೆ ಸದರಿ ಜಾಗದಲ್ಲಿ ಕಟ್ಟಡ ಕಟ್ಟಲು ಸರ್ಕಾರದಿಂದ ಅನುಮತಿ ಸಿಕ್ಕಿರುತ್ತದೆ. ಆದರೆ ಆರೋಪಿತರು ಸದರಿ 03 ಗುಂಟೆ ಜಮೀನು ನಮಗೆ ಸೇರಿದೆ ಎಂದು ಹೇಳುತ್ತಿದ್ದರು.

2. ಈಗ್ಗೆ 7-8 ತಿಂಗಳ ಹಿಂದೆ ಬೆಳಿಗ್ಗೆ 9.00-10.00 ಗಂಟೆ ಸುಮಾರಿಗೆ ನಾನು ಮತ್ತು ನಮ್ಮೂರಿನ ಜನರು ಪಂಚಾಯತಿ ಕಟ್ಟಡ ಕಟ್ಟುವ ಜಾಗಕ್ಕೆ ಬಂದಿದ್ದೆವು. ಸದರಿ ಜಾಗದಲ್ಲಿ ಲೈನ್ ಔಟ್ ಹಾಕಲು ಕೂಲಿ ಕೆಲಸಕ್ಕೆ ಚಾಸಾ-1, 4 ಮತ್ತು 5 ರವರು ಬಂದಿದ್ದರು. ಚಾಸಾ-1, 4 ಮತ್ತು 5 ರವರು ಪಂಚಾಯತಿ ಕಟ್ಟಡ ಕಟ್ಟುವ ಜಾಗದಲ್ಲಿ ಲೈನ್ ಔಟ್ ಹಾಕುತ್ತಿದ್ದರು. ಆ ಸಮಯದಲ್ಲಿ ವೈ.ಟಿ ಹೊನ್ನತ್ತಿ ಪಿಡಿಓ ರವರು, ಗುತ್ತಿಗೆದಾರ ಮತ್ತು ಇಂಜಿನಿಯರ್ ರವರು ಇದ್ದರು. ಸದರಿ ಜಾಗಕ್ಕೆ ಗುದ್ದಲಿ ಪೂಜೆ ಮಾಡಲು ಎಂ.ಎಲ್.ಎ ರವರು ಬಂದು ಪೂಜೆ

ಮಾಡಿ ಹೋದರು. ಪಂಚಾಯತಿ ಕಟ್ಟಡ ಕಟ್ಟುವ ಜಾಗಕ್ಕೆ ಲೈನ್ ಔಟ್ ಹಾಕುವಾಗ ಆರೋಪಿತರು ಅಲ್ಲಿಗೆ ಬಂದು ತಕರಾರು ಮಾಡಿದ್ದರು. ನಂತರ ಸದರಿ ಲೈನ್ ಔಟ್ ಕೆಲಸ ಮುಗಿಯಿತು.

3. ಲೈನ್ ಔಟ್ ಕೆಲಸ ಮುಗಿದ ಮೇಲೆ ಮಧ್ಯಾಹ್ನ 2.00 ಗಂಟೆಗೆ ಚಾಸಾ-1, 4 ಮತ್ತು 5 ರವರು ಕಟ್ಟೆ ಮೇಲೆ ಕುಳಿತಿದ್ದರು. ಆರೋಪಿತರು ಆಗ ಹಾರಾಡಿಕೊಂಡು ಚಾಸಾ-1, 4 ಮತ್ತು 5 ರವರು ಕುಳಿತಿದ್ದ ಜಾಗಕ್ಕೆ ಬಂದರು. ಆರೋಪಿತರು ಚಾಸಾ-1, 4 ಮತ್ತು 5 ರವರಿಗೆ ವಾಲ್ಮೀಕಿಯವರು ನೀವು 20 ಮನೆಯವರಿಲ್ಲಾ, ಎಷ್ಟು ಕಾರಬಾರು ಮಾಡುತ್ತೀರಿ, ಸೂಳೇ ಮಕ್ಕಳಾ, ಮಿಂಡ್ರಿ ಮಕ್ಕಳಾ ಎಂದು ಜಾತಿ ಎತ್ತಿ ಬೈದರು. ಆರೋಪಿತರು ಚಾಸಾ-1, 4 ಮತ್ತು 5 ರವರಿಗೆ ಕೈಯಿಂದ ಹೊಡಿ-ಬಡಿ ಮಾಡಿದರು. ಆರೋಪಿತರು ಚಾಸಾ-1, 4 ಮತ್ತು 5 ರವರಿಗೆ ನೀವು ಪಂಚಾಯತಿ ಜಾಗಕ್ಕೆ ಬಂದರೆ ನಿಮ್ಮನ್ನು ನೋಡಿಕೊಳ್ಳುತ್ತೇವೆಂದು ಜೀವ ಬೆದರಿಕೆ ಹಾಕಿದರು.

4. ಆರೋಪಿತರು ಚಾಸಾ-1, 4 ಮತ್ತು 5 ಹೊಡಿ-ಬಡಿ ಮಾಡಿದ್ದರಿಂದ ಅವರಿಗೆ ಗಾಯಗಳಾಗಿದ್ದವು. ಆಗ ಅವರು ಚಿಕಿತ್ಸೆ ಪಡೆಯಲು ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋದರು. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

5. ಹಾಲಿ ಎಂ.ಎಲ್.ಎ ರವರು ಪಂಚಾಯತಿ ಕಟ್ಟಡ ಕಟ್ಟುವ ಜಾಗಕ್ಕೆ ಬಂದು ಗುದ್ದಲಿ ಪೂಜೆ ನೆರವೇರಿಸಿ ಹೋದ ನಂತರ ಗಲಾಟೆ ಪ್ರಾರಂಭವಾಯಿತು. ಗಲಾಟೆಯಾದ ಜಾಗದಲ್ಲಿ ಸುಮಾರು 25-30 ಜನ ಸೇರಿದ್ದರು. ಸದರಿ ಎಂ.ಎಲ್.ಎ ರವರು ಕಾಂಗ್ರೆಸ್ ಪಕ್ಷದಿಂದ ಗೆದ್ದು ಬಂದವರು ಎಂದರೆ ನಿಜ. ಆರೋಪಿತರು ಬಿಜೆಪಿ ಕಾರ್ಯಕರ್ತರು ಎಂದರೆ ಸಾಕ್ಷಿಯು ಆರೋಪಿತರು ಮೊದಲು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದು, ಈಗ ಬಿಜೆಪಿ ಪಕ್ಷದ ಕಾರ್ಯಕರ್ತರಾಗಿರುತ್ತಾರೆ ಎಂದು ನುಡಿದಿರುತ್ತಾರೆ.

6. ಕರಿಯಲ್ಲಪ್ಪ ಇವರು ಪಂಚಾಯತಿ ಕಟಟಡ ಕಟ್ಟಲು 03 ಜಾಗವನ್ನು ದಾನವಾಗಿ ಕೊಟ್ಟ ಬಗ್ಗೆ ನಾನು ಅದರ ಕಾಗದ ಪತ್ರಗಳನ್ನು ನೋಡಿರುತ್ತೇನೆ. ವೈ.ಟಿ ಹೊನ್ನತ್ತಿ ಗ್ರಾಮ

ಪಂಚಾಯತಿಗೆ ಕಟ್ಟಡ ಕಟ್ಟಲು ಒಂದು ಸಲ ಮಂಜೂರಾಗಿರುತ್ತದೆ. ಪೊಲೀಸರು ನನಗೆ ಪ್ರಕರಣದ ಕುರಿತು ವಿಚಾರಣೆ ಮಾಡಬೇಕಾಗಿದೆ ಬಾ ಎಂದು ಪೊಲೀಸ್ ನೋಟೀಸನ್ನು ಕೊಟ್ಟಿರಲಿಲ್ಲ. ಘಟನಾ ಸ್ಥಳದಲ್ಲಿ ಅಂದಾಜು 50-60 ಊರಿನ ಜನರು ಇದ್ದರು. ಆ ಕ್ಷೇತ್ರದ ಎಂ.ಎಲ್.ಎ ರವರು ಬಂದಾಗ 100-150 ಜನ ಸೇರಿದ್ದರು ಎಂದರೆ ನಿಜ.

7. ನಾವು ನಮ್ಮ ಅಜ್ಜನ ಕಾಲದಿಂದಲೂ ಕಾಂಗ್ರೇಸ್ ಪಕ್ಷದಲ್ಲಿ ಇರುತ್ತೇವೆ. ಚಾಸಾ-7 ರವರೂ ಸಹ ಕಾಂಗ್ರೇಸ್ ಪಕ್ಷದಲ್ಲಿರುತ್ತಾರೆ ಎಂದರೆ ನಿಜ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಾನು ಪೊಲೀಸರ ಮುಂದೆ ಕೊಟ್ಟ ನನ್ನ ಹೇಳಿಕೆಯಲ್ಲಿ ಗಲಾಟೆಯಾದ ಸಮಯವನ್ನು ಹೇಳಿರುವುದಿಲ್ಲ.

8. ಗ್ರಾಮ ಪಂಚಾಯತಿ ಕಟ್ಟಡ ಕಟ್ಟುವ ಕಾಲಕ್ಕೆ ಆರೋಪಿತರು ಅಲ್ಲಿಗೆ ಬಂದು ತಕರಾರು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1, 4 ಮತ್ತು 5 ರವರು ಒಂದೇ ಜಾತಿಗೆ ಸೇರಿರುತ್ತಾರೆಂದರೆ ನಿಜ. ಜನಪ್ರತಿನಿಧಿಯವರು ಊರಿನ ಶಾಲೆಯ ಹತ್ತಿರ ಟಿಫನ್ ವ್ಯವಸ್ಥೆ ಮಾಡಿಸಿದ್ದರು. ನಾನು MLA ರವರ ಜೊತೆ ಎಷ್ಟು ಸಮಯ ಇದ್ದೆನು ಎಂದು ನನಗೆ ಈಗ ಹೇಳಲಾಗುವುದಿಲ್ಲ. ಗುದ್ದಲಿ ಪೂಜೆ ಮಾಡಲು MLA ರವರು ಬೆಳಿಗ್ಗೆ 11.00 ಗಂಟೆಗೆ ಬಂದು ಮಧ್ಯಾಹ್ನ 1-1.30 ರವರೆಗೆ ಇದ್ದರು.

9. ನಾನು ಗಲಾಟೆಯಾದ ಸ್ಥಳಕ್ಕೆ ಎಷ್ಟು ಹೊತ್ತಿಗೆ ಹೋದೆ ಎಂದು ನನಗೆ ನೆನಪಿರಲಿಲ್ಲ ಕಾರಣ ನಾನು ಗಡಿಯಾರವನ್ನು ಕೈಗೆ ಕಟ್ಟಿರಲಿಲ್ಲ. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಅಂದಾಜು 8-10 ಜನ ಇದ್ದರು. ಗ್ರಾಮ ಪಂಚಾಯತಿಗೆ ನೀಡಿದ್ದ 03 ಗುಂಟೆ ಜಮೀನಿನ ಬಾಬ್ತು ನ್ಯಾಯಾಲಯದಲ್ಲಿ ದಾವೆ ಇತ್ತು. ಯಾವ ಆರೋಪಿಗಳ ಕೈಯಲ್ಲಿ ಏನೇನು ಆಯುಧಗಳು ಇದ್ದವು ಎಂದು ನನಗೆ ಹೇಳಲಾಗುವುದಿಲ್ಲ. ಗಲಾಟೆಯಲ್ಲಿ ಚಾಸಾ-1 ರವರ ಕಾಲಿನ ಮೀನಖಂಡಕ್ಕೆ ಪೆಟ್ಟಾಗಿತ್ತು. ಚಾಸಾ-1 ರವರ ಬಟ್ಟೆ ಹರಿದಿತ್ತು.

10. ನಾನು MLA ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ಧ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತರು ಜಾತಿ ಎತ್ತಿ ಬೈದಿಲ್ಲ ಮತ್ತು ಹೊಡಿ ಬಡಿ ಮಾಡಿಲ್ಲ ಹಾಗೂ ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪಂಚಾಯತಿ ಕಟ್ಟಡ ಕಟ್ಟಲು ಯಾವುದೇ ಪರವಾನಿಗಿ

ಇರಲಿಲ್ಲ ಎಂದರೆ ಸರಿಯಲ್ಲ. ಪ್ರತೀ ವರ್ಷ 6 ನೇ ತಿಂಗಳು ಮಳೆಗಾಲ ಎಂದರೆ ನಿಜ. ಘಟನೆ ನಡೆದ ದಿನಾಂಕ ನನಗೆ ನೆನಪಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿದ ದಿನಾಂಕ ನನಗೆ ಗೊತ್ತಿಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿತದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.